ಎಂದು ಸಲಹೆ ಕೊಟ್ಟಿದ್ದರು. ಈ ಪಾರ್ಕ್‌ನಲ್ಲಿ ಇಂದಿಗೂ ರಾಷ್ಟ್ರೀಯ ಹಬ್ಬಗಳನ್ನು, ವಿಶೇಷವಾಗಿ ಗಾಂಧಿ ಜಯಂತಿ ಮತ್ತು ಟ್ಯಾಗೋರ್ ಜಯಂತಿಯನ್ನು ಪ್ರತಿವರ್ಷ ಆಚರಿಸಿಕೊಂಡು ಬರುತ್ತಿದ್ದೇವೆ.

ಕಳೆದ 10 ವರ್ಷಗಳು ನಿಸಾರ್ ಅವರ ಪಾಲಿಗೆ ವೈಯಕ್ತಿಕವಾಗಿ ನೋವಿನ ದಿನಗಳು. ಪ್ರೀತಿಯ ಪತ್ನಿ ಹಾಸಿಗೆ ಹಿಡಿದಿದ್ದರು. ಮನೆಯ ಕೆಲವು ನಿರ್ಧಾರಗಳು ಅವರನ್ನು ಖಿನ್ನರನ್ನಾಗಿಸಿದ್ದವು. ಮನಸ್ಸನ್ನು ಹಗುರ ಮಾಡಿಕೊಳ್ಳಲಿಕ್ಕಾಗಿ ಸಂಜೆ ಗಾಂಧಿ ಬಜಾರಿಗೆ ಬಸ್‌ನಲ್ಲಿ ಬಂದು, ನನ್ನ ಜೊತೆಯಲ್ಲಿ ಕೃಷ್ಣರಾವ್ ಪಾರ್ಕ್‌ನಲ್ಲಿ ವಾಕ್ ಮಾಡಿ, ಕೊನೆಗೆ ಎನ್.ಆರ್. ಕಾಲೊನಿಯ 'ಕುಸುಮ ಸ್ಟೋರ್ಸ್'ನಲ್ಲಿ ಬಾದಾಮಿ ಹಾಲು ಕುಡಿದು ಆಟೊ ಹತ್ತಿ ಪದ್ಮನಾಭನಗರಕ್ಕೆ ತೆರಳುತ್ತಿದ್ದರು. ಸುಮಾರು ಒಂದು ವರ್ಷ ಹೀಗೆ ನಡೆಯಿತು.

ಸಾಮಾನ್ಯವಾಗಿ ತಾವು ಭಾಗವಹಿಸುತ್ತಿದ್ದ ಎಲ್ಲ ಕಾರ್ಯಕ್ರಮಗಳಿಗೆ ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಅವರ ಪಿಂಚಣಿ ಹಣವನ್ನು ಗಾಂಧಿ ಬಜಾರ್‌ನ ಕೆನರಾ ಬ್ಯಾಂಕ್‌ನಿಂದ ತೆಗೆದುಕೊಂಡು ಹೋಗಿ ಕೊಡುವ ಹೊಣೆಗಾರಿಕೆ ನನ್ನದೇ ಆಗಿತ್ತು. ವರ್ಷದ ಹಿಂದೆ ಪತ್ನಿಯನ್ನು ಕಳೆದುಕೊಂಡ ನಿಸಾರ್ ಏಕಾಂಗಿಯಾಗಿದ್ದರು. ಆರೋಗ್ಯ ಹದಗೆಟ್ಟು ಹೆಚ್ಚಿನ ಚಿಕಿತ್ಸೆಗಾಗಿ ಅಮೆರಿಕಕ್ಕೆ ಹೋಗಿ ಬಂದರೂ ಮೊದಲಿನಂತೆ ಸುಧಾರಿಸಲಿಲ್ಲ. 'ನಿತ್ಯೋತ್ಸವ' ಸಂಕಲನ ಐದು ಭಾಷೆಗಳಿಗೆ ಅನುವಾದಗೊಂಡು, ಆ ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ – 'ನಾನಿನ್ನು ಹೆಚ್ಚು ದಿನ ಬದುಕಿರಲಾರೆ, ದೇವರ ಕರೆ ಬಂದಿದೆ!' ಎಂದು ಸೂಚ್ಯವಾಗಿ ತಿಳಿಸಿದ್ದರು. ಅದಾದ ನಂತರ ಅವರ 84ನೇ ಜನ್ಮ ದಿನಾಚರಣೆ ಮತ್ತು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಮತ್ತೊಂದು ಸಮಾರಂಭ ಅವರ ಕೊನೆಯ ಕಾರ್ಯಕ್ರಮಗಳು.

ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ಎಲ್ಲರೂ ಮನೆಯಲ್ಲಿಯೇ ಉಳಿಯಬೇಕಾದ ಸಂದರ್ಭ ಎದುರಾದಾಗ, ಮಾರ್ಚ್ 30ರಂದು ನಾನವರಿಗೆ ಫೋನ್ ಮಾಡಿ ಪೆನ್ಷನ್ ಹಣ ತಂದುಕೊಡುವ ಬಗ್ಗೆ ವಿಚಾರಿಸಿದ್ದೆ. 'ಈಗ ಬೇಡ' ಎಂದಿದ್ದರು. ಏಪ್ರಿಲ್ 29ರಂದು ಅವರೇ ಫೋನ್ ಮಾಡಿ, '30 ಸಾವಿರ ತಗೊಂಡು ಬಾ' ಎಂದರು. ಅಂದು ರಾತ್ರಿ 8 ಗಂಟೆಗೆ 30 ಸಾವಿರ ಹಣ ತೆಗೆದುಕೊಂಡು ಹೋದೆ. ಹಣ ಅವರಿಗೆ ಕೊಟ್ಟು ಚೆಕ್ ಪಡೆದಾಗ ಆಶ್ಚರ್ಯ ಕಾದಿತ್ತು. ಗಟ್ಟಿಯಾಗಿ ಪೆನ್ ಹಿಡಿಯಲು ಆಗದೆ ಬರೀ ಗೀಚಿದ್ದರು. 'ಬ್ಯಾಂಕ್‌ಗೆ ಹೋಗಿ ಫೋನ್ ಮಾಡು. ಮ್ಯಾನೇಜರ್‌ಗೆ ಹೇಳುತ್ತೇನೆ' ಎಂದರು. ಮಾರನೆಯ ದಿನ ಬ್ಯಾಂಕ್‌ಗೆ ಹೋಗಲು ರೆಡಿಯಾಗಿ, ಚೆಕ್ ಗಮನಿಸಿದರೆ ಅದರಲ್ಲಿ 30,000ಕ್ಕೆ ಬದಲು 3,000 ಎಂದಾಗಿತ್ತು. ಅವರ ಮಗಳು ಫಾತಿಮಾಗೆ ಫೋನ್ ಮಾಡಿ ವಿವರಿಸಿದೆ. 'ಬೇರೆ ಚೆಕ್ ಬರೆಸಿ ಕೊಡುವೆ, ಬನ್ನಿ' ಎಂದರು. ಸಂಜೆ ಹೋದಾಗ ನಿಸಾರರು ಮಲಗಿದ್ದರು. ಅರ್ಧಗಂಟೆ ನಂತರ ಎದ್ದವರು ಚೆಕ್ ಬರೆದು ಕೊಟ್ಟರು. ಅವರ ಹಸ್ತಾಕ್ಷರ ಎಂದಿನಂತೆಯೇ ಇತ್ತು. 'ನಿನಗೆ ತುಂಬಾ ತೊಂದರೆ ಕೊಡುತ್ತಿದ್ದೇನೆ, ಕ್ಷಮಿಸಪ್ಪಾ' ಎಂದು ಎರಡೆರಡು ಬಾರಿ ಹೇಳಿ ನಾನು ಮುಜುಗರಕ್ಕೊಳಗಾಗುವಂತೆ ಮಾಡಿದರು. ಮೇ 2ರಂದು ಹಣ ಡ್ರಾ ಮಾಡಿ ಅವರ ಮಗಳಿಗೆ ತಿಳಿಸಿದೆ. ಮಾರನೇ ದಿನ (ಮೇ 3) ಮಧ್ಯಾಹ್ನ ಬರಸಿಡಿಲಿನಂತೆ ಬಂತು, ನಿಸಾರ್ ನಿಧನದ ಸುದ್ದಿ.

ನಿಸಾರ್ ಅವರು ಬಹುವಾಗಿ ಪ್ರೀತಿಸುತ್ತಿದ್ದ ಗಾಂಧಿ ಬಜಾರ್ ನನ್ನ ಪಾಲಿಗೀಗ ಖಾಲಿ ಖಾಲಿ. ಈಗ ಯಾವ ಸಾಹಿತಿಗಳೂ ಗಾಂಧಿ ಬಜಾರ್‌ಗೆ ಬರುತ್ತಿಲ್ಲ. ನಿಸಾರ್ ನನ್ನಂತಹ ಸಾಮಾನ್ಯರನ್ನೂ ಬಹಳ ಗೌರವದಿಂದ ಮಾತನಾಡಿಸುತ್ತಿದ್ದರು. ಅವರಂತಹ ದೊಡ್ಡ ವ್ಯಕ್ತಿ ಸ್ನೇಹಿತರಾಗಿದ್ದುದು ನನ್ನ ಜೀವನದ ಪುಣ್ಯ ಎಂದು ಭಾವಿಸಿರುವೆ. ಅವರು ಬಹುವಾಗಿ ಪ್ರೀತಿಸುತಿದ್ದ ಗುಲ್‌ಮೊಹರ್ ಮರ ಹೂವಿನಿಂದ ಕಂಗೊಳಿಸುವುದನ್ನು ನೋಡಿದಾಗಲೆಲ್ಲಾ ನಿಸಾರ್ ನೆನಪು ಮರುಕಳಿಸುತ್ತದೆ.